

ಟಾರ್ಚ್‌ಲೈಟ್ ಪೆರೇಡ್ ನೋಡುವ ಉತ್ಸಾಹ ಹೊರಟುಹೋಯಿತು.

‘ಈ ದಿನ ರೆಸ್ಟ್ ತೊಗೋಳಿ. ನಾಳೆ ಜೂಗೆ ಹೋಗೋಣ’ ಎಂದ ಅನಂತ. ಆವಂತಿ ಮಗಳಿಗೆ ಟ್ಯಾಬ್ಲೆಟ್ ಕೊಟ್ಟು ಮಲಗಿಸಿದಳು. ಮರುದಿನ ತಿಂಡಿ ತಿಂದು ಹತ್ತೂವರೆಗೆ ಆವಂತಿ–ಕೀರ್ತಿ ಶಾಪಿಂಗ್ ಮಾಡಲು ಹೊರಟರು.

‘ಏನು ಶಾಪಿಂಗ್ ಮಾಡ್ತೀರಾ?’

‘ಮೈಸೂರು ಸಿಲ್ಕ್ ಸೀರೆ ತೊಗೋಬೇಕು’.

‘ಅಷ್ಟೇ ತಾನೆ?’ ಅನಂತ ಕೇಳಿದ.

‘ಮೈಸೂರು ಬದನೆ, ಮಲ್ಲಿಗೆ, ವಿಳ್ಳೆಯದೆಲೆ, ಗುರುಸ್ವೀಟ್ ಮಾರ್ಟ್ ಮೈಸೂರುಪಾಕ್’ ಆನಂದ ಪಟ್ಟಿ ಹೇಳಿದ.

‘ಹಾಗಾದ್ರೆ ಇವರಿಬ್ಬರು ಬೇಗ ಬರ್ತಾರೇಂತ ನಿರೀಕ್ಷೆ ಮಾಡುವ ಹಾಗೇ ಇಲ್ಲ. ನಾವು ಮಕ್ಕಳ ಜೊತೆ ಜೂಗೆ ಹೋಗಿ ಬರ್ತೇವೆ’ ಅನಂತ ಹೇಳಿದ.

‘ಅನಂತ ನೀನು ಮಕ್ಕಳ ಜೊತೆ ಹೋಗಿ ಬಾ; ನೀನೇನು ಮಾಡ್ತೀಯಾ?’

‘ನಾನು ಮೊದಲು ನಾವಿದ್ದ ವಿದ್ಯಾರಣ್ಯಪುರಂ ಕಡೆಗೆ ಹೋಗಿ ಬರ್ತೇನೆ. ನನ್ನ ಫ್ರೆಂಡ್‌ನ ಮೀಟ್ ಮಾಡಬೇಕು’.

‘ಹೋಗಿ ಬಾ. ನಾನು ಮಕ್ಕಳ ಜೊತೆ ಹೋಗಿ ಬರ್ತೀನಿ’.

‘ನಂದಾಗೂ ಜ್ವರ ಇಲ್ಲ. ನಮ್ಮ ಜೊತೆ ಬರ್ತಾಳೆ ಸರಿ ಕಣೋ’.

ಆನಂದ ಆಟೊ ಹತ್ತಿ ಚಾಮುಂಡಿಪುರಂ ಸರ್ಕಲ್‌ಗೆ ಬಂದಿಳಿದ. ಚಾಮುಂಡಿಪುರಂ ಮೂರನೇ ಕ್ರಾಸ್‌ನಲ್ಲಿ ಆನಂದ ಇದ್ದಿದ್ದು, ಅವನ ತಂದೆ ರಾಮಣ್ಣ ಪ್ರೈಮರಿ ಸ್ಕೂಲು ಮೇಷ್ಟ್ರು. ತಾಯಿ ಶಾರದಮ್ಮ ಗೃಹಿಣಿ. ಅವರಿಗೆ ಮೂವರು ಮಕ್ಕಳು. ದೊಡ್ಡವನು ಕೇಶವ. ತಂದೆಯ ಹಾಗೆ ಶಿಕ್ಷಣ ಇಲಾಖೆಯಲ್ಲಿದ್ದ. ಜೂನಿಯರ್ ಕಾಲೇಜೊಂದರಲ್ಲಿ ಉಪನ್ಯಾಸಕ ಅವನ ಹೆಂಡತಿ ಟೆಲಿಫೋನ್ಸ್‌ನಲ್ಲಿದ್ದಳು. ಇಬ್ಬರು ಮಕ್ಕಳು ಅವರ ಕುಟುಂಬ ಹಾಸನದಲ್ಲಿತ್ತು. ಎರಡನೆಯವನೇ ಆನಂದ. ಬ್ಯಾಂಕ್ ಮ್ಯಾನೇಜರ್. ಅವನ ಹೆಂಡತಿ ಆವಂತಿ ಎಂಜಿನಿಯರ್. ಮಕ್ಕಳೊಡನೆ ಬೆಂಗಳೂರಿನಲ್ಲಿ ವಾಸ. ಕೊನೆಯವಳು ಹರಿಪ್ರಿಯ. ಬಿ.ಎ. ಮಾಡಿ ಎಂಜಿನಿಯರ್ ಕೈ ಹಿಡಿದು ಬಾಂಬೆಯಲ್ಲಿದ್ದಳು. ಅವಳಿಗೆ ಒಬ್ಬ ಮಗ. ತಂದೆ–ತಾಯಿ ಕೊನೆಯವರೆಗೂ ಮೈಸೂರಿನಲ್ಲಿದ್ದು, ತೀರಾ ಕೈಲಾಗದಾದಾಗ ಮಕ್ಕಳ ಮನೆಯಲ್ಲಿ ಕಾಲ ಕಳೆದಿದ್ದರು. ಅವನ ತಂದೆ ಕಣ್ಮುಚ್ಚಿ 10 ವರ್ಷಗಳಾಗಿದ್ದವು. ತಾಯಿ ಕಣ್ಮುಚ್ಚಿ 3 ವರ್ಷಗಳಾಗಿದ್ದವು. ಎರಡನೇ ಕ್ರಾಸ್‌ನಲ್ಲಿ ರಾಮಾಶಾಸ್ತ್ರಿಗಳಿದ್ದರು. ತುಂಬಾ ಮಡಿವಂತರು. ಸಂಪ್ರದಾಯಸ್ಥರು. ದೇವಸ್ಥಾನದಲ್ಲಿ ಅರ್ಚಕರಾಗಿದ್ದ ರಾಮಾಶಾಸ್ತ್ರಿ ಜಾತಕ ನೋಡುತ್ತಿದ್ದರು. ಮದುವೆ, ಮುಂಜಿ, ಗೃಹಪ್ರವೇಶ, ಇತ್ಯಾದಿಗಳಿಗೆ ಮುಹೂರ್ತ ಇಟ್ಟುಕೊಡುತ್ತಿದ್ದರು. ಶಾಸ್ತ್ರ ಹೇಳುತ್ತಿದ್ದರು. ರಾಮನವಮಿಯಲ್ಲಿ ಪ್ರವಚನ ಮಾಡುತ್ತಿದ್ದರು. ಅವರಿಗೆ ಮೂವರು ಗಂಡು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳಿದ್ದರು. ಎರಡನೇ ಮಗ ಮಾಧವ. ಆನಂದನ ಕ್ಲಾಸ್‌ಮೇಟ್. ಪ್ರೈಮರಿ ಶಾಲೆಯಿಂದ ಪಿ.ಯು.ಸಿ.ಯವರೆಗೂ ಒಟ್ಟಿಗೆ ಓದಿದ್ದರು. ಮಾಧವ ತುಂಬಾ ಒಳ್ಳೆಯ ಹುಡುಗ. ಅವನಿಗೆ ಜೋರಾಗಿ ಮಾತನಾಡುವುದೇ ಗೊತ್ತಿರಲಿಲ್ಲ.

‘ಅವರಪ್ಪ ಜೋರು ಮಾಡಿ ಮಾಡಿ ಮಕ್ಕಳ ಬಾಯೇ ಕಿತ್ತುಕೊಂಡುಬಿಟ್ಟಿದ್ದಾರೆ. ಶಾಸ್ತ್ರಿಗಳು ಹಾಕಿದ ಗೆರೆ ಮಕ್ಕಳು ದಾಟಲ್ಲ. ಸ್ವಂತ ತೀರ್ಮಾನ ತೆಗೆದುಕೊಂಡೇ ಅವರಿಗೆ ಗೊತ್ತಿಲ್ಲ’ ಎನ್ನುತ್ತಿದ್ದರು ಆನಂದ್ ತಂದೆ. ಆನಂದ್ ಮಾಧವ ಇದ್ದ ಮನೆಯ ಮುಂದೆ ನಿಂತ ಮನೆಯ ಸ್ವರೂಪ ಬದಲಾಗಿತ್ತು. ಮನೆಯ ಮೇಲೆ ಮನೆ ಕಟ್ಟಿದ್ದರು. ಕಾಂಪೌಂಡ್ ದೊಡ್ಡದಿರಲಿಲ್ಲ. ಆದರೆ ಮನೆಗಳು ಆಧುನಿಕ ವಿನ್ಯಾಸದಿಂದ ಕಂಗೊಳಿಸುತ್ತಿತ್ತು. ಮನೆಯ ಮುಂದೆ ರಾಘವಶಾಸ್ತ್ರಿ ಎಂಬ ಬೋರ್ಡ್ ಇತ್ತು. ಮಾಧವನ ಅಣ್ಣನ ಹೆಸರು ರಾಘವ ಎಂದು ನೆನಪಾಯಿತು. ರಾಘವನೇ ರಾಘವಶಾಸ್ತ್ರಿ ಎನ್ನಿಸಿತು. ಮನೆಯ ಬಾಗಿಲಿಗೆ ತೋರಣ ಕಟ್ಟಿದ್ದರು. ಮನೆಯ ಮುಂದೆ ದೊಡ್ಡದಾಗಿ ರಂಗೋಲಿ ಹಾಕಿದ್ದರು. ಇವತ್ತು ಯಾವುದೋ ಹಬ್ಬವಿರಬೇಕು? ಅವನು ಯೋಚಿಸಿದ. ಅಷ್ಟರಲ್ಲಿ ಒಂದು ಹುಡುಗ ಹೊರಗೆ ಬಂದ.

‘ಇದು ರಾಮಾಶಾಸ್ತ್ರಿಗಳ ಮನೇನಾ?’ ಆನಂದ ಕೇಳಿದ.

ಆ ಹುಡುಗ ‘ಹೌದು ಒಳಗೆ ಬನ್ನಿ’ ಎಂದವನು ‘ಅಪ್ಪಾ, ತಾತನ್ನ ಕೇಳಿಕೊಂಡು ಯಾರೋ ಬಂದಿದ್ದಾರೆ’ ಎಂದ. ಪಂಚೆ ಉಟ್ಟು, ಶಲ್ಯ ಹೊದ್ದಿದ್ದ ತರುಣ ಹೊರಗೆ ಬಂದ. ಅವನನ್ನು ನೋಡಿದ ಕೂಡಲೇ ಆನಂದ ಕೇಳಿದ.

‘ನೀನು ಶಂಕರ ಅಲ್ವಾ?’

‘ಹೌದು. ಅರೇ ನೀನು ಆನಂದಣ್ಣ ಅಲ್ವಾ? ಬಾ ಒಳಗೆ, ರಾಘಣ್ಣ ಆನಂದಣ್ಣ ಬಂದಿದ್ದಾನೆ’ ಎಂದ ಜೋರಾಗಿ.

ಶಂಕರ ಆಗ ಚಿಕ್ಕವನು. 4ನೇ ತರಗತಿಯಲ್ಲಿದ್ದ ಮಾಧವನನ್ನು ಅಣ್ಣಾ ಎಂದು ಕರೆಯುವಂತೆ ಆನಂದನನ್ನು ಅಣ್ಣಾ ಎನ್ನುತ್ತಿದ್ದ. ತಮ್ಮನ ಕರೆ ಕೇಳಿ ರಾಘವ ಹೊರಗೆ ಬಂದ.

‘ಓ ಆನಂದ ಬಾ ಒಳಗೆ. ಇವತ್ತು ನಮ್ಮ ಮನೆಯಲ್ಲಿ ಸತ್ಯನಾರಾಯಣ ಪೂಜೆ. ಒಳ್ಳೆಯ ದಿನ ಬಂದಿದ್ದೀಯಾ ಶಂಕರೂ’.

ಶಂಕರ ಅವನನ್ನು ವೆರಾಂಡಕ್ಕೆ ಸೇರಿದಂತಿದ್ದ ಬಾಗಿಲಿನಿಂದ ಹಿಂಭಾಗಕ್ಕೆ ಕರೆದೊಯ್ದು ಕೈಕಾಲು ತೊಳೆಯಲು ನೀರು ಕೊಟ್ಟ.

‘ಆನಂದಣ್ಣ ನಿನ್ನನ್ನು ನೋಡಿ ತುಂಬಾ